

## ನೀಲ ಸಾಗರದ ನೀಲಿ ನಕ್ಷತ್ರಗಳು

ಉಡುಪಿ ನಗರದಿಂದ 10 ಕಿ.ಮೀ. ದೂರದಲ್ಲಿರುವ ಮಟ್ಟು ಬೀಚ್ ರಾಜ್ಯದ ಅಜ್ಞಾತ ಸೌಂದರ್ಯಗಳಲ್ಲಿ ಒಂದಾಗಿದ್ದು, ಇತ್ತೀಚೆಗೆ ಜನಪ್ರಿಯತೆ ಗಳಿಸುತ್ತಿದೆ. ಕತ್ತಲಲ್ಲಿ ನೀಲಿ ಪ್ರಭೆ ಬೀರುವ 'ಜೈವಿಕ ಪ್ರಕಾಶ'ವೇ ಇಲ್ಲಿನ ಪ್ರವಾಸಿಗರ ಆಕರ್ಷಣೆಯ ಕೇಂದ್ರ ಬಿಂದು. ಸಮುದ್ರ ಪ್ರಕಾಶವೆಂದು ಕರೆಯಲ್ಪಡುವ ಈ ಸೋಜಿಗಕ್ಕೆ 'ನೋಕ್ಟಿಲುಕಾ ಸಿಂಟಿಲಾನ್ಸ್' ಎಂಬ ಸೂಕ್ಷ್ಮಾಣು ಜೀವಿಗಳು ಕಾರಣ. ಮಿಣುಕು ಹುಳುಗಳು ಹಾಗೂ ಆಳ ಸಮುದ್ರದಲ್ಲಿನ ಕೆಲ ಜೀವಿಗಳು ಕೃಷ್ಣ ಪಕ್ಷದ ರಾತ್ರಿಗಳಲ್ಲೇಳುವ ಎತ್ತರದಲೆಗಳಿಂದ ವಿಚಲಿತಗೊಂಡು ರಾಸಾಯನಿಕ ವಿಕಿರಣಗಳನ್ನು ಸೂಸುತ್ತವೆ. ಇದೇ ವಿಸ್ಮಯಕರ ನೀಲಿ ಹಸಿರು ವರ್ಣಮಯ ಜೈವಿಕ ಪ್ರಕಾಶದ ರಹಸ್ಯ. ಪ್ರಶಾಂತ ಮಟ್ಟು ಬೀಚ್ ಇದೇ ಕಾರಣದಿಂದಾಗಿ ಹೆಚ್ಚು ಸುಂದರವಾಗಿದ್ದು, ಬೆರಗು ಹುಟ್ಟಿಸುತ್ತಿದೆ. ಒಂದು ಬದಿಯಲ್ಲಿ ತೆಂಗಿನ ಮರಗಳು ಹಾಗೂ ಹಿನ್ನೀರು, ಇನ್ನೊಂದು ಬದಿಯಲ್ಲಿ ಸಮುದ್ರ, ಇಕ್ಕೆಲಗಳ ಕೆಂಪು ಮಣ್ಣು, ನೀಲಿ ಸಮುದ್ರದ ಬೆಳಕು, ಇವುಗಳ ನಡುವೆ ರಸ್ತೆಯಲ್ಲಿ ಸಾಗುವ ಬೀಚ್ ನಡಿಗೆ, ಇವೇ ಮುಂತಾದವುಗಳು ಪ್ರವಾಸಿಗರ ಉತ್ಸಾಹವನ್ನು ಇಮ್ಮಡಿಗೊಳಿಸುತ್ತವೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ



## ಕನ್ನಡ ಕುದ್ರು ಕಂಡೀರಾ?

ಕುಂದಾಪುರದಿಂದ ರಾಷ್ಟ್ರೀಯ ಹೆದ್ದಾರಿ–66ರಲ್ಲಿ ಮರವಂತೆಯ ಕಡಲ ಸೌಂದರ್ಯ ಕಣ್ತುಂಬಿಕೊಳ್ಳಲು ಬೈಕ್‌ನಲ್ಲಿ ಸಾಗುತ್ತಿದ್ದೆ. ಹೆಮ್ಮಾಡಿಯ ಬಳಿ ರಸ್ತೆಯ ಎಡ ಭಾಗದಲ್ಲಿ ಒಂದು ಫಲಕ ನನ್ನ ಗಮನ ಸೆಳೆಯಿತು. 'ಕನ್ನಡ ಕುದ್ರು' ಎಂಬ ಊರನ್ನು ಸೂಚಿಸುವ ಫಲಕ ಅದಾಗಿತ್ತು. ಕುದ್ರು ಎಂದರೆ ಸಣ್ಣ ದ್ವೀಪ ಎಂದರ್ಥ ಎಂದು ತಿಳಿದಿದ್ದ ನನಗೆ ಕನ್ನಡ ಕುದ್ರು ಎಂಬ ಹೆಸರು ವಿಶೇಷವೆನಿಸಿ ಬೈಕ್ ನಿಲ್ಲಿಸಿ ಒಂದು ಫೋಟೊ ಕೂಡ ಕ್ಲಿಕ್ಕಿಸಿಕೊಂಡೆ. ಕುದ್ರುವಿನ ವಿಶೇಷ ಏನೇ ಇರಲಿ, ಕನ್ನಡ ನಾಡಿನಲ್ಲಿ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಮಾತ್ರ ಕನ್ನಡಕ್ಕೆ ಹೆಚ್ಚು ಪ್ರಾಮುಖ್ಯತೆ ಸಿಗುವ ಈ ಕಾಲಘಟ್ಟದಲ್ಲಿ ಒಂದು ಪುಟ್ಟ ದ್ವೀಪದ ಹೆಸರಿಗೆ 'ಕನ್ನಡ' ಎಂಬ ಪದವನ್ನು ಜೊತೆಗೆ ಸೇರಿಸಿರುವುದು ಹೆಮ್ಮೆ ಎನಿಸಿತು. ಕನ್ನಡದ ಕಂಪನ್ನು ತನ್ನ ಹೆಸರಿನಲ್ಲೇ ಸೇರಿಸಿಕೊಂಡಿರುವ ಕನ್ನಡ ಕುದ್ರು ಸೌಪರ್ಣಿಕಾ ಮತ್ತು ಪಂಚಗಂಗಾವಳಿ ನದಿಗಳಿಂದ ಸುತ್ತುವರೆದಿರುವ ವಸತಿ ದ್ವೀಪವಾಗಿದೆ. ಕರಾವಳಿಯ ತೆಂಗು ಮತ್ತು ದೋಣಿಗಳ ಸಂಚಾರ ಕಾಣಸಿಗುವ ಈ ದ್ವೀಪ ಹೆಸರಿನಷ್ಟೇ ಪ್ರಾಕೃತಿಕ ಸೊಬಗನ್ನೂ ಹೊಂದಿದೆ. ನೀವೂ ಈ ಹೆದ್ದಾರಿಯಲ್ಲಿ ಪಯಣಿಸಿದರೆ ಕನ್ನಡ ಕುದ್ರು ಫಲಕ ಗಮನಿಸಿ ಕನ್ನಡದ ಕಂಪು ಮನಕೆ ತಂದುಕೊಳ್ಳುವಿರಲ್ಲವೆ?

–ಅನೀಶ್ ಬಿ., ಕೊಪ್ಪ




## ನೀರು ಇಂಗದ ಭೀಮನ ದೋಣಿ

ಪಾಂಡವರು ಅಜ್ಞಾತವಾಸದಲ್ಲಿದ್ದಾಗ ರಾಣೆಬೆನ್ನೂರ ತಾಲ್ಲೂಕಿನ ಮಾಗೋಡ ಎಂಬ ಗ್ರಾಮಕ್ಕೆ ಬಂದಿದ್ದರು ಎಂಬ ಐತಿಹ್ಯ ಇದೆ. ಕುಡಿಯಲು ನೀರಿಗೂ ಪರದಾಡುವಂಥ ಬಿರುಬೇಸಿಗೆ. ಆಗ ಭೀಮ ಸಮೀಪದಲ್ಲಿದ್ದ ಕಲ್ಲು ಬಂಡೆಯನ್ನು ಗುದ್ದಿ ಒಡೆಯುತ್ತಾನಂತೆ. ಅವನ ಏಟಿಗೆ ಬಂಡೆ ದೋಣಿ ಆಕಾರದಲ್ಲಿ ಸೀಳಿ ನೀರು ಚಿಮ್ಮಿತು ಎಂದು ಜನಪದರು ಹೇಳುತ್ತಾರೆ. ಇದನ್ನು ಭೀಮನ ದೋಣಿ ಎಂದೇ ಕರೆಯುತ್ತಾರೆ. ಈ ದೋಣಿಯಲ್ಲಿ ನೀರು ಎಂದೂ ಖಾಲಿ ಆಗದಿರುವುದು ಬೆರಗು ಹುಟ್ಟಿಸುತ್ತದೆ.

–ಮಲ್ಲಪ್ಪ ಫ. ಕರೇಣ್ಣನವರ,
ಮೋಟೆಬೆನ್ನೂರು

